# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 851(927) |
| ಮಾನ್ಯ ಸದಸ್ಯರ ಹೆಸರು: | ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು: | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ: | 15.12.2025 |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು? ಅವುಗಳಿಗೆ ಮಂಜೂರಾದ ದೈಹಿಕ ಶಿಕ್ಷಕರ/ ಉಪನ್ಯಾಸಕರ ಸಂಖ್ಯೆ ಎಷ್ಟು ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಖ್ಯೆ ಎಷ್ಟು; (ಪ್ರತ್ಯೇಕವಾದ ಮಾಹಿತಿ ನೀಡುವುದು);</td><td>ರಾಜ್ಯದಲ್ಲಿರುವ ಸರ್ಕಾರಿ ಶಾಲೆ/ ಕಾಲೇಜುಗಳ ವಿವರ:-
<table>
<tr><th rowspan="2">ಶಾಲೆ /ಕಾಲೇಜುಗಳ ವಿಧ</th><th rowspan="2">ಶಾಲೆ /ಕಾಲೇಜುಗಳ ಸಂಖ್ಯೆ</th><th colspan="3">ದೈಹಿಕ ಶಿಕ್ಷಣ / ಉಪನ್ಯಾಸಕರ ಹುದ್ದೆವಾರು ವಿವರ</th></tr>
<tr><th>ಮಂಜೂರಾದ ಹುದ್ದೆ</th><th>ಕಾರ್ಯ ನಿರ್ವಹಿಸುತ್ತಿರುವರ ಹುದ್ದೆಗಳ ಸಂಖ್ಯೆ</th><th>ಖಾಲಿ ಹುದ್ದೆಗಳ ಸಂಖ್ಯೆ</th></tr>
<tr><td>ಪ್ರಾಥಮಿಕ ಶಾಲೆ</td><td>41088</td><td>6772</td><td>3422</td><td>3350</td></tr>
<tr><td>ಪ್ರೌಢಶಾಲೆ</td><td>5024</td><td>5224</td><td>3339</td><td>1885</td></tr>
<tr><td>ಪದವಿ ಪೂರ್ವ ಕಾಲೇಜು</td><td>1319</td><td>20</td><td>04</td><td>16</td></tr>
</table></td></tr>
<tr><td>ಆ)</td><td>ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಈ ಹಿಂದೆ ಯಾವ ವರ್ಷದಲ್ಲಿ ದೈಹಿಕ ಶಿಕ್ಷಕರ/ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ನಡೆದಿದೆ? (ಪ್ರತ್ಯೇಕವಾದ ಮಾಹಿತಿ ನೀಡುವುದು);</td><td>ಪ್ರಾಥಮಿಕ ಶಿಕ್ಷಣ ವಿಭಾಗ<br>ದೈಹಿಕ ಶಿಕ್ಷಣ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯನ್ನು 2008-09 ರಲ್ಲಿ ನಡೆಸಲಾಗಿದೆ.<br>ಪ್ರೌಢ ಶಿಕ್ಷಣ ವಿಭಾಗ<br>2014-15 ನೇ ಸಾಲಿನಲ್ಲಿ ಒಟ್ಟು 148 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ ನೇಮಕಾತಿ ಮಾಡಿಕೊಳ್ಳಲಾಗಿದೆ.<br>ಬೆಳಗಾವಿ ವಿಭಾಗ : 11<br>ಬೆಂಗಳೂರು ವಿಭಾಗ: 88<br>ಕಲಬುರಗಿ ವಿಭಾಗ : 19<br>ಮೈಸೂರು ವಿಭಾಗ : 30</td></tr>
</table>

| | | |
|---|---|---|
| | | **ಪದವಿ ಪೂರ್ವ ವಿಭಾಗ:-**<br>2024-25ನೇ ಸಾಲಿನಲ್ಲಿ ಬಡ್ತಿ ಕೋಟಾದಡಿ ಖಾಲಿ ಇದ್ದ ದೈಹಿಕ ಶಿಕ್ಷಣ ಉಪನ್ಯಾಸಕರ 10 ಹುದ್ದೆಗಳನ್ನು (03 ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ ಮತ್ತು 07 ಉಳಿಕೆ ಮೂಲ ವೃಂದ) ಮುಂಬಡ್ತಿ ಮೂಲಕ ಭರ್ತಿ ಮಾಡಲಾಗಿದೆ. |
| ಇ) | ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ ದೈಹಿಕ ಶಿಕ್ಷಕರ/ ಉಪನ್ಯಾಸಕರ ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಚಿಂತನೆ ನಡೆಸಿದೆಯೇ; ಹಾಗಿದ್ದಲ್ಲಿ, ಯಾವ ಹಂತಕ್ಕೆ ಎಷ್ಟು ಸಂಖ್ಯೆಯಲ್ಲಿ ನೇಮಕಾತಿ ಮಾಡಿಕೊಳ್ಳಲು ನಿರ್ಧರಿಸಿದೆ? (ಪ್ರತ್ಯೇಕ ಮಾಹಿತಿ ನೀಡುವುದು. | **ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವಿಭಾಗ**<br>ಕಲಾಣ ಕರ್ನಾಟಕ ಭಾಗದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಒಟ್ಟು 5267 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ.<br><br>**ಪದವಿ ಪೂರ್ವ ವಿಭಾಗ:-**<br>ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ 10 ದೈಹಿಕ ಶಿಕ್ಷಣ ಉಪನ್ಯಾಸಕರ (ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 3 ಹುದ್ದೆಗಳು ಮತ್ತು ಉಳಿಕೆ ಮೂಲ ವೃಂದದ 7 ಹುದ್ದೆಗಳು ಒಳಗೊಂಡಿರುತ್ತವೆ) ಹುದ್ದೆಗಳನ್ನು ಭರ್ತಿ ಮಾಡಲು ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದಿಂದ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಪ್ರಸ್ತಾವನೆ ಮತ್ತು ದಾಖಲೆಗಳನ್ನು ನೀಡಲಾಗಿರುತ್ತದೆ.<br><br>ಪ್ರಸ್ತುತ ಕೇಂದ್ರೀಕೃತ ದಾಖಲಾತಿ ಘಟಕವು (CAC) ಆಯ್ಕೆ ಪ್ರಕ್ರಿಯೆಗೆ ಅಧಿಸೂಚನೆ ಹೊರಡಿಸಬೇಕಿರುತ್ತದೆ.<br><br>ಬಡ್ತಿ ಕೋಟಾದಡಿ ಖಾಲಿ ಇರುವ 6 ಹುದ್ದೆಗಳನ್ನು (ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದಲ್ಲಿ 1 ಹಾಗೂ ಉಳಿಕೆ ಮೂಲ ವೃಂದದಲ್ಲಿ 5 ಹುದ್ದೆಗಳು) ಶಾಲಾ ಶಿಕ್ಷಣ ಇಲಾಖೆಯ ಅರ್ಹ ಪ್ರೌಢ ಶಾಲಾ ದೈಹಿಕ ಶಿಕ್ಷಕರಿಗೆ ಮುಂಬಡ್ತಿ ನೀಡಲು ಅಗತ್ಯ ಪ್ರಸ್ತಾವನೆ / ದಾಖಲೆಗಳನ್ನು ಪಡೆಯಲಾಗುತ್ತಿದೆ. |

**ಇಪಿ 153 ಪಿಎಂಎ 2025**

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು